**ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿ.ಸಿ. ನಂ. 1751/2024**

| | | | |
|---|---|---|---|
| **ಹೆಸರು** | : | **ಶ್ರೀದೇವಿ ಕೊಳ್ಳಿ** | **ಚಾಸಾ. 3** |
| **ಗಂಡನ ಹೆಸರು** | : | **ಭೀಮನ ಗೌಡ** | **ಪ್ರಾ.ಸಾ. 1** |
| **ವಯಸ್ಸು** | : | **32 ವರ್ಷ** | **ದಿನಾಂಕಃ 08-09-2025** |
| **ಉದ್ಯೋಗ** | : | **ಅಬಕಾರಿ ನಿರೀಕ್ಷಕರು** | |
| **ವಾಸಸ್ಥಳ** | : | **ಗದಗ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ದಿನಾಂಕಃ 05-07-2019 ರಿಂದ 10-01-2025 ರವರೆಗೆ ಅಬಕಾರಿ ಉಪನಿರೀಕ್ಷಕರಾಗಿ ಚಿತ್ತಾಪುರದಲ್ಲಿ ಕಾರ್ಯನಿರ್ವಹಿಸಿದ್ದೇನೆ.

ದಿನಾಂಕಃ 07-05-2023 ರಂದು ಸಾಯಂಕಾಲ 7 ಗಂಟೆ ಸುಮಾರಿಗೆ ಚಿಂಚೋಳಿ ಪಟ್ಟಣದ ಅಂಬೇಡ್ಕರ ಸರ್ಕಲ ಹತ್ತಿರ ದ್ವಿಚಕ್ರ ವಾಹನದಲ್ಲಿ ಅಕ್ರಮವಾಗಿ ಮದ್ಯಪಾನ ಸಾಗಾಟ ಮಾಡುತ್ತಿದ್ದಾರೆ ಎಂದು ಖಚಿತ ಭಾತ್ಮಿ ಬಂದಿದ್ದು ಆದ್ದರಿಂದ ನನ್ನ ಮೇಲಾಧಿಕಾರಿಗಳ ಸೂಕ್ತ ಮಾರ್ಗದರ್ಶನ ಪಡೆದುಕೊಂಡು ನಾನು, ಸಿಬ್ಬಂದಿಯಾದ ಚಾಸಾ-1 ಮತ್ತು 2 ಸೇರಿ ಭಾತ್ಮಿ ಸ್ಥಳಕ್ಕೆ ಸಾಯಂಕಾಲ 7.15 ಗಂಟೆ ಸುಮಾರಿಗೆ ಹೊರಟು ಸಾಯಂಕಾಲ 7-45 ಗಂಟೆ ಸುಮಾರಿಗೆ ಭಾತ್ಮಿ ಸ್ಥಳದಲ್ಲಿ ಹೋದಾಗ ಅಲ್ಲಿ ಅನುಮಾನಸ್ಪದವಾಗಿ ದ್ವಿಚಕ್ರವಾಹನ ಒಂದು ಬರುತ್ತಿರುವುದನ್ನು ಗಮನಿಸಿ ಅದನ್ನು ನಿಲ್ಲಿಸಲು ಕೈ ಸನ್ನೆ ಮಾಡಿದಾಗ ಸದರಿ ವಾಹನ ಚಾಲಕನು ತನ್ನ ಹತ್ತಿರವಿದ್ದ ಚೀಲವನ್ನು ಸ್ಥಳದಲ್ಲಿ ಬಿಟ್ಟು ಓಡಿ ಹೋಗಿರುತ್ತಾನೆ. ಸದರಿ ಓಡಿ ಹೋದ ವ್ಯಕ್ತಿ ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿಯಾಗಿರುತ್ತಾನೆ.

ಸ್ಥಳದಲ್ಲಿ ಪಂಚರಾಗಲೂ ಯಾರು ಮುಂದೆ ಬರದೇ ಇರುವ ಕಾರಣ ನನ್ನ ಜೊತೆ ಇದ್ದ ಸಿಬ್ಬಂದಿಯಾದ ಚಾಸಾ-1 ಮತ್ತು 2ರವರನ್ನು ಪಂಚರಾಗಿ ನೇಮಿಸಿ ಸ್ಥಳದಲ್ಲಿ ಶೋಧನಾ ಸಮುಚ್ಚಿತ ಪತ್ರವನು ತಯಾರಿಸಿ ಶೋಧನೆ ಮಾಡಿದಾಗ ಅಲ್ಲಿ 2 ಪಟ್ಟಿಗೆಗಳು ಸಿಕ್ಕಿದು ಪ್ರತಿಯೊಂದು ಪೆಟ್ಟಿಗಳಲ್ಲಿ 90 ML ಅಳತೆಯ 96 US ವಿಸ್ಕಿ ಬಾಟಲಗಳು ದೊರೆತಿರುತ್ತದೆ. ಹೀಗೆ ಒಟ್ಟು 192 ಬಾಟಲಗಳನ್ನು ಜಪ್ತಿ ಮಾಡಿ ರಾಸಾಯನಿಕ ಪರೀಕ್ಷೆಗೆ ಕಳುಹಿಸಲು 26 ಬಾಟಲಗಳನ್ನು ಪ್ರತ್ಯೇಕವಾಗಿ ಸೀಲ್ ಮಾಡಿ ಸ್ಥಳದಲ್ಲಿ ಸಾಯಂಕಾಲ 8 ರಿಂದ 9 ಗಂಟೆ ವರೆಗೆ ಜಪ್ತಿ ಪಂಚನಾಮೆಯನ್ನು ಜರುಗಿಸಿ ಚಾಸಾ-1 ಮತ್ತು 2ರವರ ಸಹಿಗಳನ್ನು ಪಡೆದಿರುತ್ತೇನೆ.

ನಂತರ ಕಛೇರಿಗೆ ಬಂದು ಪ್ರಕರಣವನ್ನು ದಾಖಲಿಸಿರುತ್ತೇನೆ. ನಂತರ ಮುಂದಿನ ತನಿಖೆಗಾಗಿ

ಕಡತವನ್ನು ಚಾಸಾ-4ರವರಿಗೆ ಸಲ್ಲಿಸಿದ್ದೇನೆ.

ಆ ದಿನ ತಯಾರಿಸಿದ ಶೋಧನಾ ಸಮುಚ್ಚಿತ ಪತ್ರವನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-1 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ಜಪ್ತಿ ಪಂಚನಾಮೆಯನ್ನು ನಾನೇ ಜರುಗಿಸಿದ್ದು ಮತ್ತು ಅದರಲ್ಲಿರುವ ಸಹಿ ನನ್ನದೇ. ಸದರಿ ಜಪ್ತಿ ಪಂಚನಾಮೆಯನ್ನು ನಿಪಿ-2 ಎಂದು, ನನ್ನ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ಮಾದರಿ ಸೀಲಿನ ಪತ್ರವನ್ನು ನಾನು ತಯಾರಿಸಿದ್ದು ಅದರಲ್ಲಿರುವ ಸಹಿ ನನ್ನದೇ. ಸದರಿ ದಾಖಲೆಯನ್ನು ನಿಪಿ-3 ಎಂದು, ನನ್ನ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ದೂರು ನಾನೇ ಸಲ್ಲಿಸಿದ್ದು ಅದನ್ನು ನಿಪಿ-4 ಎಂದು, ನನ್ನ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ಪ್ರ.ವ.ವರದಿ ನಾನೇ ದಾಖಲಿಸಿದ್ದು ಅದನ್ನು ನಿಪಿ-5 ಎಂದು, ನನ್ನ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ 26 ಮದ್ಯದ ಬಾಟಲಿಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಪ್ರತ್ಯಕ ಸೀಲ್ ಮಾಡಿದ್ದು ಅವುಗಳನ್ನು ಒಟ್ಟುಗೂಡಿಸಿ ಮು.ಮಾ. 1 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ SBK ವಕೀಲರಿಂದಃ</u>**

ಬಾತ್ಮಿ ಬಂದಾಗ ನಾನು ಚಿಂಚೋಳಿಯ ಅಂಬೇಡ್ಕರ ಸರ್ಕಲ ಅಕ್ಕಪಕ್ಕದಲ್ಲಿ ಗಸ್ತು ಕರ್ತವ್ಯದಲ್ಲಿದ್ದೆ. ಸ್ಥಳಕ್ಕೆ ಹೋಗಲು 30 ನಿಮಿಷ ಯಾವ ಕಾರಣಕ್ಕಾಗಿ ಬೇಕಾಯಿತು ಎಂದು ಪ್ರಶ್ನಿಸಿದಾಗ ಸಾಕ್ಷಿ ವಾಹನಗಳನ್ನು ಪರಿಶೀಲಿಸಲು ಸಮಯವಾಗಿತ್ತು ಎಂದು ನುಡಿಯುತ್ತಾರೆ. ವಾಹನ ಸಂಖ್ಯೆ ಬಗ್ಗೆ ಬಾತ್ಮಿ ಬಂದಿರುವುದಿಲ್ಲ. ದ್ವಿಚಕ್ರ ವಾಹನ ಎಂದು ನನ್ನ ದೂರಿನಲ್ಲಿ ಉಲ್ಲೇಖವಿದೆ. ಅಂಬೇಡ್ಕರ ಸರ್ಕಲ ಹತ್ತಿರ ಸಾಕಷ್ಟ ಜನರು ಓಡಾಡುತ್ತಾರೆ ಎಂದರೆ ಸರಿ. ನಮ್ಮ ಸಿಬ್ಬಂದಿ ಮತ್ತು ನಾನು ಆರೋಪಿಗೆ ಹಿಡಿಯಲು ಪ್ರಯತ್ನ ಪಟ್ಟಿರುತ್ತೇವೆ. ಆದರೆ ಅವನು ಸಿಕ್ಕಿರುವುದಿಲ್ಲ. ಆರೋಪಿ ಬೀದರ ರಸ್ತೆ ಮುಖಾಂತರ ಓಡಿ ಹೋಗಿರುತ್ತಾನೆ. ನಮ್ಮ ವಾಹನದ ಸಹಾಯದಿಂದ ಆರೋಪಿಗೆ ಹಿಡಿಯಲು ಪ್ರಯತ್ನ ಪಟ್ಟಿರುವುದಿಲ್ಲ. ಬೀದರ ರಸ್ತೆಯಲ್ಲಿ ಸಾಕಷ್ಟು ವಾಹನಗಳು ಓಡಾಡುತ್ತವೆ ಎಂದರೆ ಸರಿ. ಬೀದರ ರಸ್ತೆಯಲ್ಲಿ ಆರೋಪಿ ನೇರವಾಗಿ ಓಡಿ ಹೋಗಿರುತ್ತಾನೆ. ಆರೋಪಿ ಮುದ್ದೆ ಮಾಲನ್ನು ಬೀಸಾಕಿ ಓಡಿ ಹೋಗಿರುವ ಬಗ್ಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2023ರಲ್ಲಿ ಇಂಟರನೇಟ್ ಇತ್ತು ಎಂದರೆ ಸರಿ. ಸಾಮಾನ್ಯವಾಗಿ ವಾಹನದ ಸಂಖ್ಯೆಯಿಂದ ವಾಹನದ ಮಾಲೀಕರ ಹೆಸರು ಗೊತ್ತಾಗುತ್ತದೆ ಎಂದರೆ ಸಾಕ್ಷಿ ಇತ್ತು ಆಗ ಅದನ್ನು ತಿಳಿದುಕೊಳ್ಳಲು ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ಸ್ಥಳದಲ್ಲಿ ವಾಹನದ ಮಾಲೀಕರ ಬಗ್ಗೆ ತಿಳಿದುಕೊಳ್ಳಲು ಪ್ರಯತ್ನ ಪಟ್ಟಿಲ್ಲ. ಯಾವುದೇ ಘಟನೆಯಾಗಿಲ್ಲ ಆದ್ದರಿಂದ ಪ್ರಯತ್ನ ಪಟ್ಟಿಲ್ಲ ಎಂದರೆ ಸರಿಯಲ್ಲ.

ಆರೋಪಿ ರಸ್ತೆಯ ಬದಿಯಲ್ಲಿ ವಾಹನವನ್ನು ಬಿಟ್ಟು ಹೋಗಿರುತ್ತಾನೆ. ರಸ್ತೆ ಯಾವ ಬದಿಯಲ್ಲಿ ಬಿಟ್ಟು ಹೋಗಿರುತ್ತಾನೆ ಎಂದು ನನಗೆ ನೆನಪಿಲ್ಲ. ಯಾವುದೇ ಘಟನೆ ನಡೆದಿಲ್ಲ ಆದ್ದರಿಂದ ನನಗೆ ನೆನಪಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಚುನಾವಣೆ ಸಮಯಕ್ಕೆ ಸಂಬಂಧಪಟ್ಟ ಅಧಿಕಾರಿಗಳು ವಾಹನಗಳನ್ನು ಪರಿಶೀಲಿಸುತ್ತಾರೆ ಎಂದರೆ  ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ಸಾರ್ವಜನಿಕರಿಗೆ ಪಂಚರಾಗಲೂ ಕರೆದಿದ್ದೇನೆ ಆದರೆ ಅವರು ಬಂದಿರುವುದಿಲ್ಲ. ಸದರಿ ಸಾರ್ವಜನಿಕರ ಹೆಸರು ನನಗೆ ನೆನಪಿಲ್ಲ. ಯಾವುದೇ ಸರಕಾರಿ ಇಲಾಖೆಯ ಸಿಬ್ಬಂದಿಗಳನ್ನು ಪಂಚರಾಗಲೂ ನಾನು ಕರೆದಿರುವುದಿಲ್ಲ. ಘಟನೆಯಾಗದೇ ಇರುವ ಕಾರಣ ಕರೆದಿಲ್ಲ ಎಂದರೆ ಸರಿಯಲ್ಲ. ನನ್ನ ಹತ್ತಿರ ಕಡತವಿದ್ದಾಗ ವಾಹನದ ಮಾಲೀಕರ ಬಗ್ಗೆ ತಿಳಿದುಕೊಳ್ಳಲು ಪ್ರಯತ್ನ ಪಟ್ಟಿಲ್ಲ. ಕೋಟಾ ಭರ್ತಿಗಾಗಿ ಆರೋಪಿಯ ವಾಹನದ ಮೇಲೆ ಸುಳ್ಳು ಪ್ರಕರಣ ದಾಖಲಿಸಿದ ಕಾರಣ ಪ್ರಯತ್ನ ಪಟ್ಟಿಲ್ಲ ಎಂದರೆ ಸರಿಯಲ್ಲ.

ಸ್ಥಳದಲ್ಲಿ 2 ಗಂಟೆಗಳ ಕಾಲ ಪಂಚನಾಮೆ ಮಾಡಿದ್ದೇನೆ ಎಂದರೆ ಸಾಕ್ಷಿ ರಾತ್ರಿ 8 ರಿಂದ 9 ರವರೆಗೆ ಮಾಡಿದ್ದೇನೆ ಎಂದು ನುಡಿಯುತ್ತಾರೆ. 1 ಗಂಟೆಗಳ ಕಾಲ ಅಲ್ಲಿ ಬಹಳಷ್ಟು ವಾಹನಗಳನ್ನು ಬಂದಿದ್ದವೇ ಎಂದು ಪ್ರಶ್ನಿಸಿದಾಗ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸ್ದಳದಲ್ಲಿ ಪುರಸಭೆಯವರು ಲೈಟನ್ನು ಹಾಕಿರುತ್ತಾರೆ ಎಂದರೆ ಸಾಕ್ಷಿ ಸ್ಥಳದಲ್ಲಿ ಲೈಟ ಇತ್ತು ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಮದ್ಯಪಾನ ನಮ್ಮ ಇಲಾಖೆಯ ಡೀಪೋದಿಂದ ಸಾಗಾಟವಾಗುತ್ತವೆ ಎಂದರೆ ಸರಿ. ಸಾಮಾನ್ಯವಾಗಿ ಮದ್ಯಪಾನ ಯಾವ ವೈನಶಾಪಗೆ ಕಳುಹಿಸಿರುವ ಬಗ್ಗೆ ನಮಗೆ ಗೊತ್ತಾಗುತ್ತದೆ ಎಂದರೆ ಸರಿ. ಸಾಮಾನ್ಯವಾಗಿ ಮದ್ಯಪಾನ ಯಾವ ವೈನಶಾಪದಿಂದ ಖರೀದಿ ಮಾಡಿರುವ ಬಗ್ಗೆ ಗೊತ್ತಾಗುತ್ತದೆ ಎಂದರೆ ಸರಿ. ಮು.ಮಾ-1ನ್ನು ಯಾವ ವೈನಶಾಪದಿಂದ ತಂದಿರುವ ಬಗ್ಗೆ ನಾನು ವಿಚಾರಣೆ ಮಾಡಿಲ್ಲ. ಕೋಟಾ ಭರ್ತಿಗಾಗಿ ಬೇರೆ ಪ್ರಕರಣದ ಮುದ್ದೆ ಮಾಲನ್ನು ಈ ಪ್ರಕರಣದಲ್ಲಿ ಸೇರಿಸಿದ ಕಾರಣ ವಿಚಾರಣೆ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಮೇಲಾಧಿಕಾರಿಗಳ ಮಾತು ಕೇಳಿ ಆರೋಪಿಯ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಬೀಸಾಕಿರುವ ಬಾಟಲಿಗಳನ್ನು ಈ ಪ್ರಕರಣದಲ್ಲಿ ಮುದ್ದೆ ಮಾಲಾಗಿ ಸೇರಿಸಲಾಗಿದೆ ಎಂದರೆ ಸರಿಯಲ್ಲ.

ಆರೋಪಿ ತನ್ನ ದ್ವಿಚಕ್ರ ವಾಹನದಲ್ಲಿ ಚೀಲ ತೆಗೆದುಕೊಂಡು ಹೋಗುತ್ತಿದ್ದ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಯಾವುದೇ ಒಬ್ಬ ವ್ಯಕ್ತಿ ಇಷ್ಟೊಂದು ಮುದ್ದೇ ಮಾಲನ್ನು ದ್ವಿಚಕ್ರ ವಾಹನದಲ್ಲಿ ತೆಗೆದುಕೊಂಡು ಹೋಗಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ದಾಳಿ ಕಾಲಕ್ಕೆ ನಾನು ಯಾವುದೇ ಭಾವಚಿತ್ರವನ್ನು ಪಡೆದಿಲ್ಲ. ಯಾವುದೇ ಘಟನೆಯಾಗಿಲ್ಲ ಆದ್ದರಿಂದ ಭಾವಚಿತ್ರ ಪಡೆದಿಲ್ಲ ಎಂದರೆ ಸರಿಯಲ್ಲ. ದಾಳಿ ಕಾಲಕ್ಕೆ ನನ್ನ ಹತ್ತಿರ ಮೊಬೈಲ ಫೋನ ಇತ್ತು. ಘಟನಾ ಸ್ಥಳದ ಪಶ್ಚಿಮ ದಿಕ್ಕಿಗೆ ಖಾಲಿ ಜಾಗ ಇತ್ತು ಎಂದು ಸುಳ್ಳು ಬರೆದಿದ್ದೇನೆ ಎಂದರೆ ಸರಿಯಲ್ಲ. ಸದರಿ ಸ್ಥಳದ ಪಶ್ಚಿಮ ದಿಕ್ಕಿಗೆ ಒಣಿ ಇದೆ ಎಂದರೆ ಸರಿಯಲ್ಲ. ಗೋಣಿ ಚೀಲ ಮತ್ತು ಪ್ಲಾಸ್ಟಿಕ ಚೀಲ ಬೇರೆ ಬೇರೆ ಇರುತ್ತವೆ ಎಂದರೆ ಸರಿ. ಪ್ಲಾಸ್ಟಿಕ ಚೀಲ ಎಂದರೆ

ಯಾವ ಚೀಲ ಎಂದು ಪ್ರಶ್ನಿಸಿದಾಗ ಸಾಕ್ಷಿ ಗೊಬ್ಬರ ಚೀಲ ಎಂದು ನುಡಿಯುತ್ತಾರೆ. ಸದರಿ ಗೊಬ್ಬರ ಚೀಲವನ್ನು ತನಿಖಾಧಿಕಾರಿಗಳಿಗೆ ನೀಡಿದ್ದೇನೆ. ದೂರಿನಲ್ಲಿ ಪ್ಲಾಸ್ಟಿಕ ಚೀಲ ಎಂದು ಉಲ್ಲೇಖವಿದೆ ಎಂದರೆ ಸರಿ. ಯಾವುದೋ ವಾಹನವನ್ನು ಈ ಪ್ರಕರಣದಲ್ಲಿ ಸೇರಿಸಿ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. 26 ಬಾಟಲಿಗಳ ಬ್ಯಾಚ ಸಂಖ್ಯೆ ನನಗೆ ನೆನಪಿಲ್ಲ. ಸದರಿ ವಾಹನದ ಮಾಲೀಕನ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿಯೊಂದು ಪೆಟ್ಟಿಗೆಯಿಂದ 13 ಬಾಟಲಗಳನ್ನು ತೆಗೆದಿರುತ್ತೇನೆ. ಈ ರೀತಿ ದೂರನಲ್ಲಿ ಆಗಲಿ ಅಥವಾ ಪಂಚನಾಮೆಯಲ್ಲಾಗಲಿ ಉಲ್ಲೇಖವಿಲ್ಲ. ಯಾವುದೇ ಘಟನೆಯಾಗಿಲ್ಲ ಮತ್ತು ಬೇರೆ ಪ್ರಕರಣದ ಮುದ್ದೇ ಮಾಲನ್ನು ಈ ಪ್ರಕರಣದಲ್ಲಿ ಸೇರಿಸಿದ ಕಾರಣ ಉಲ್ಲೇಖ ಮಾಡಿಲ್ಲ ಎಂದರೆ ಸರಿಯಲ್ಲ. ಪ್ರತ್ಯೇಕವಾಗಿ ಸೀಲ್ ಮಾಡಿರುವ ಬಗ್ಗೆ ಮತ್ತು ಉಳಿದ ಮುದ್ದೇ ಮಾಲನ್ನು ಪ್ರತ್ಯೇಕವಾಗಿ ತನಿಖಾಧಿಕಾರಿಗಳಿಗೆ ನೀಡಿರುವ ಬಗ್ಗೆ ಉಲ್ಲೇಖವಿಲ್ಲ ಎಂದರೆ ಸರಿ. ಸುಳ್ಳು ಕಥೆ ಕಟ್ಟಿರುವ ಕಾರಣ ಉಲ್ಲೇಖ ಮಾಡಿಲ್ಲ ಎಂದರೆ ಸರಿಯಲ್ಲ.

ಆ ದಿನ ಸ್ಥಳದಲ್ಲಿದ್ದ ವ್ಯಕ್ತಿ ಆರೋಪಿ ಎಂದು ಹೇಳಲು ಯಾವುದಾದರೂ ಭಾವಚಿತ್ರ ಇದೆಯೇ ಎಂದು ಪ್ರಶ್ನಿಸಿದಾಗ ಸಾಕ್ಷಿ ನನಗೆ ನೆನಪಿದೆ ಎಂದು ನುಡಿಯುತ್ತಾರೆ. ಈ ರೀತಿ ಆರೋಪಿ ಸ್ಥಳದಲ್ಲಿದ್ದ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚುನಾವಣಾಧಿಕಾರಿಗಳ ಆದೇಶ ನಮ್ಮ ಇಲಾಖೆಗೆ ಇರುತ್ತದೆ ಎಂದರೆ ಸರಿ. ಆಗ ಚುನಾವಣಾಧಿಕಾರಿಗಳ ಪರವಾನಿಗೆ ಇತ್ತೇ ಎಂದು ಪ್ರಶ್ನಿಸಿದಾಗ ಸಾಕ್ಷಿ ಯಾವುದೇ ಲಿಖಿತ ದಾಖಲೆ ಇಲ್ಲ ಆದರೆ ಬಾತ್ಮಿ ಬಂದ ಕಾರಣ ಹೋಗಿದ್ದೇನೆ ಎಂದು ನುಡಿಯುತ್ತಾರೆ. ಚಿತ್ತಾಪುರ ಉಪವಿಭಾಗದಲ್ಲಿ 3 ತಾಲ್ಲೂಕಗಳು ಇವೆ ಎಂದರೆ ಸರಿ. ಸಾಮಾನ್ಯವಾಗಿ ನಮ್ಮ ಇಲಾಖೆಯಲ್ಲಿ ಖಾಯಂ ಪಂಚರು ಇರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಘಟನೆಯಾದಾಗ ಚಿಂಚೋಳಿ ಅಬಕಾರಿ ಉಪನಿರೀಕ್ಷಕರಿಗೆ ಮಾಹಿತಿಯನ್ನು ನೀಡಿದ್ದೇನೆ. ಸದರಿ ಚಿಂಚೋಳಿ ಅಬಕಾರಿ ಉಪನಿರೀಕ್ಷಕರು ಸ್ಥಳಕ್ಕೆ ಬಂದಿರುವುದಿಲ್ಲ. ಘಟನೆಯಾಗಿರುವುದಿಲ್ಲ ಆದ್ದರಿಂದ ಸ್ಥಳಕ್ಕೆ ಬಂದಿಲ್ಲ ಎಂದರೆ ಸರಿಯಲ್ಲ. ವಾಹನವನ್ನು ಶೋಧನೆ ಮಾಡಲು ಶೋಧನಾ ಪತ್ರವನ್ನು ತಯಾರಿಸಿದ್ದೇನೆ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ಘಟನೆಯಾಗಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಮಾಡಿರುವ ಬಗ್ಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮೇಲಾಧಿಕಾರಿಗಳು ಸಹಿ ಮಾಡು ಎಂದು ಹೇಳಿದಕ್ಕೆ ನನ್ನ ದೂರಿನಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ರಾಜಕೀಯ ಪ್ರಭಾವಿ ವ್ಯಕ್ತಿಗಳ ಪ್ರಭಾವದಿಂದ ಸುಳ್ಳು ಪ್ರಕರಣಗಳನ್ನ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**